# ಲಾಕ್‌ಡೌನ್ ಸಮಯದಲ್ಲಿ ಕಂಡ ಪ್ರಕೃತಿಯ ಸಹಜ ಕಲಾಕೃತಿಗಳು




ಕಲಾವಿದನ ಜಾಣ್ಮೆಯಲ್ಲಿ ಆಕರ್ಷಕವಾಗಿ ಜೋಡಣೆಗೊಳ್ಳುವ ವಸ್ತುಗಳು ಕಲಾಕೃತಿಯಾಗಿ ರೂಪುಗೊಳ್ಳುತ್ತವೆ. 'ಪ್ರತಿಷ್ಠಾಪನಾ ಕಲೆ' ಎನ್ನಬಹುದಾದ 'ಇನ್‌ಸ್ಟಾಲೇಷನ್ ಆರ್ಟ್' ಕಲಾವಿದನ ಬುದ್ಧಿ ಮತ್ತು ಭಾವದ ಜುಗಲಬಂದಿ. ಇಲ್ಲಿನ ಕಲಾಕೃತಿಗಳು ಕಲಾವಿದನ ಸೃಷ್ಟಿಯಲ್ಲ; ಪ್ರಕೃತಿಯಲ್ಲಿ ಸಹಜವಾಗಿ ರೂಪುಗೊಂಡಿರುವ ಜೋಡಣೆಗಳು. ಈ 'ಪರಿಸರ ಪ್ರತಿಷ್ಠಾಪನೆಗಳು' ನಮ್ಮ ಸುತ್ತಲಿನ ಪ್ರಕೃತಿಯನ್ನು ಬೇರೆಯ ರೀತಿಯಲ್ಲಿ ನೋಡಲು ಪ್ರೇರೇಪಿಸುವಂತಿವೆ.

■ ಲಕ್ಷ್ಮಣ ಬಾದಾಮಿ




ವೀರೇಶ ರುದ್ರಸ್ವಾಮಿ ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಅತಿಥಿ ಉಪನ್ಯಾಸಕರು. ಅವರು ಕಾರ್ಯ ನಿಮಿತ್ತ ತಮ್ಮ ಊರಾದ ಹುನಗುಂದ ತಾಲೂಕಿನ ನಾಗೂರಿಗೆ ಬರುವುದಕ್ಕೂ ಕೊರೊನಾ ಕಾರಣದಿಂದಾಗಿ ಲಾಕ್‌ಡೌನ್ ಘೋಷಿಸುವುದಕ್ಕೂ ಸರಿಯಾಯಿತು. ಅವರ ಕಲಾ ನಿರ್ಮಿತಿಯ ಪರಿಕರಗಳೆಲ್ಲ ಬೆಂಗಳೂರಿನಲ್ಲಿಯೇ ಇದ್ದವು. ಪರಿಕರಗಳಿಲ್ಲ ಎಂದು ವೀರೇಶ ಪರಿತಪಿಸುತ್ತ ಕೂಡಲಿಲ್ಲ. ತಮ್ಮ ಸುತ್ತಲಿನ ಪರಿಸರವನ್ನೇ ಪರಿಕರಗಳನ್ನಾಗಿ ಮಾಡಿಕೊಂಡರು.

ನಾವೆಲ್ಲ ನಿತ್ಯ ನೋಡುವ ಮನುಷ್ಯ ಬದುಕಿನ ಪರಿಸರದಲ್ಲೇ ವೀರೇಶ ಅವರು ಕಲಾಕೃತಿಗಳನ್ನು ಹುಡುಕತೊಡಗಿದರು. ವರಕವಿ ಬೇಂದ್ರೆ ಹೇಳುತ್ತಾರಲ್ಲ 'ಕಣ್ಣಿಗೂ ಒಳಗೆ ಕಣ್ಣಾಗಿ...' – ಆ ರೀತಿ ವೀರೇಶ ಅವರೊಳಗಿನ ಕಲಾವಿದನ ಕಣ್ಣು ಜಾಗೃತಗೊಂಡಿತು. ಹಾಗೆ ನೋಡಿದಾಗ ಅವರ ದೃಷ್ಟಿಗೆ ಅದ್ಭುತ ಪ್ರತಿಮೆಗಳು ಕಾಣಿಸಿದವು.

ಅವರು ಮಾಡಿದ್ದಿಷ್ಟು. ಲಾಕ್‌ಡೌನ್ ಅವಧಿಯಲ್ಲಿ ಸುಮ್ಮನೆ ಕೂರಲಾಗದ ವೀರೇಶರ ಸೃಜನಶೀಲ ಮನಸ್ಸು ಊರು, ಊರಾಚೆ ಸುತ್ತತೊಡಗಿತು. ಊರೊಳಗಿನ ಬಿದ್ದ ಮನೆ, ಮುರಿದ ಚಕ್ಕಡಿ, ದನದ್ದಕ್ಕಿ, ಬಣವೆ, ಕುಳ್ಳು (ಬೆರಣಿ) ಹಚ್ಚಿದ ಸಾಲು, ಮತ್ತು ಊರಾಚೆಯ ಬಯಲು, ಗುಡ್ಡ, ನದಿ, ಇವುಗಳನ್ನೆಲ್ಲ ತಮ್ಮ